OS 183 /2023

ಪಿ.ಡಬ್ಲ್ಯೂ-1

ದಿನಾಂಕ.**26.02.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆ ವಾದಿ ಪರ ಶ್ರೀಮತಿ ಎಸ್.ವಿ. ಎಂ ವಕೀಲರಿಂದಃ**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದರಲ್ಲಿ ಬರೆದ ಎಲ್ಲಾ ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ಅಂಶಗಳು ಸತ್ಯ ಆಗಿರುತ್ತದೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ **18-8-2022** ರ ಅಕೌಂಟ್ ಸ್ಟೇಟ್ಮೆಂಟ್‌ನ್ನು ಹಾಜರುಪಡಿಸಿದ್ದು ಅದನ್ನು ನಿಪಿ**1** ಎಂದು, ದಿನಾಂಕ **17-9-2021** ರ ಸ್ವೀಕೃತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ**2** ಎಂದು, ದಿನಾಂಕ **11-9-2021** ರ ಪತ್ರದ ಸ್ವೀಕೃತಿಯನ್ನು ಹಾಜರುಪಿಡಿಸಿದ್ದು ಅದನ್ನು ನಿಪಿ**3** ಎಂದು, ದಿನಾಂಕ **11-9-2021** ರ ಪತ್ರದ ಸ್ವೀಕೃತಿ ಹಾಜರುಪಡಿಸಿದ್ದು ಅದನ್ನು ನಿಪಿ**4** ಎಂದು ದಿನಾಂಕ **15-9-2021** ರ ಬ್ಯಾಂಕ್ ನವರು ನೀಡಿದ ಪತ್ರ ವನ್ನು ನಿಪಿ**5** ಎಂದು, ದಿನಾಂಕ **17-9-2021** ರ ಬ್ಯಾಂಕ್ ನವರು ನೀಡಿದಂತಹ ನೋಟೀಸು ಹಾಜರುಪಡಿಸಿದ್ದು ಅದನ್ನು ನಿಪಿ**6** ಎಂದು, ಲೀಗಲ್ ನೋಟೀಸು ಹಾಜರುಪಡಿಸಿದ್ದು ಅದನ್ನು ನಿಪಿ**7** ಎಂದು, ಎರಡು ಅಂಚೆ ರಸೀದಿಗಳನ್ನು ನಿಪಿ**8** ಮತ್ತು ನಿಪಿ**9** ಎಂದು, ಒಂದು ಅಂಚೆ ಸ್ವೀಕೃತಿಯನ್ನು ನಿಪಿ**10** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ವೈ.ಪಿ. ಎಂ ವಕೀಲರಿಂದಃ-**

ಪ್ರತಿವಾದಿ ಪರ ವಕೀಲರು ಹಾಜರು ಇದ್ದು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.

**ಓ.ಕೇ. ಸ. ಇ .ಎ . ಒ**

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಹೊಸನಗರ